# 2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ.

## ಎಸ್.ಸಿ. ನಂ:- 167/2019

ಪಿಡಬ್ಲ್ಯೂ : 5
ಸಿಡಬ್ಲ್ಯೂ : 6

| | | |
|---|---|---|
| ಸಾಕ್ಷಿದಾರರ ಹೆಸರು | :: | ಮುದ್ದಯ್ಯ |
| ತಂದೆಯ ಹೆಸರು | :: | ತಿಮ್ಮಯ್ಯ |
| ವಯಸ್ಸು | :: | 70 ವರ್ಷ |
| ವೃತ್ತಿ | :: | ವ್ಯವಸಾಯ |
| ವಾಸ | :: | ದೇವರ ಮುದ್ದನಹಳ್ಳಿ |

ದಿನಾಂಕ 16-09-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಸರ್ಕಾರಿ ಅಭಿಯೋಜಕರಿಂದ:-

1 ನೇ ಆರೋಪಿಯು ನನ್ನ ಅಕ್ಕ. 2 ನೇ ಆರೋಪಿಯು ನನ್ನ ಮಗಳ ಗಂಡ. ನನ್ನ ಮಗಳ ಹೆಸರು ಲಕ್ಷ್ಮೀ. ನನ್ನ ಮಗಳು ಈಗ ಬದುಕಿಲ್ಲ. ಆರೋಪಿಗಳ ಕಿರುಕುಳ ತಾಳಲಾರದೇ ಆಕೆಯು ಸೀಮೆ ಎಣ್ಣೆ ಹಾಕಿಕೊಂಡು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಳು.

ದಿ: 1-1-18 ರಂದು ನನ್ನ ಮಗಳು ಲಕ್ಷ್ಮೀ ಸೀಮೆಎಣ್ಣೆಯನ್ನು ಸುರಿದುಕೊಂಡು, ಬೆಂಕಿ ಹಾಕಿಕೊಂಡು ತೀರಿಕೊಂಡಳು. ಆಕೆಯು ಆ ರೀತಿ ಮಾಡಿಕೊಂಡಾಗ ಸಂಜೆ 7 ಗಂಟೆ ಆಗಿತ್ತು. ಆಕೆಯು ಲಕ್ಷ್ಮೀಪುರದಲ್ಲಿರುವ ಆಕೆಯ ಗಂಡನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. 1 ಮತ್ತು 2 ನೇ ಆರೋಪಿಗಳು ನನ್ನ ಮಗಳಿಗೆ ಕಿರುಕುಳ ಕೊಡುತ್ತಾ ಇದ್ದರು ಮತ್ತು ಆಗಾಗ್ಗೆ ಆಕೆಯ ಬಳಿ ಜಗಳ ಮಾಡುತ್ತಿದ್ದರು. ನನ್ನ ಮಗಳ ಜೊತೆಗೆ 1 ನೇ ಆರೋಪಿ ಮತ್ತು ನನ್ನ ಮಗಳ ಇಬ್ಬರು ಮಕ್ಕಳು ವಾಸವಾಗಿದ್ದರು. 2 ನೇ ಆರೋಪಿಯು ಕೆ.ಇ.ಬಿಯಲ್ಲಿ ಕೆಲಸ ಮಾಡುತ್ತಾ ಕೊಪ್ಪದಲ್ಲಿ ವಾಸವಾಗಿದ್ದ. 1 ನೇ ಆರೋಪಿಯು ನನ್ನ ಮಗಳಿಗೆ ಸಣ್ಣ-ಪುಟ್ಟ ವಿಚಾರಗಳಿಗೂ ಬೈದು ಗಲಾಟೆ ಮಾಡಿ, ಕಿರುಕುಳ ನೀಡುತ್ತಿದ್ದರು. ಈ ಬಗ್ಗೆ ಗ್ರಾಮದವರು ಮತ್ತು ನಾವು ಆರೋಪಿಗಳಿಗೆ ಹಿಂಸೆ ನೀಡದಂತೆ ಮತ್ತು ಸಂಸಾರ ನಡೆಸಿಕೊಂಡು ಹೋಗುವಂತೆ ತಿಳುವಳಿಕೆ ನೀಡಿದ್ದೆವು. 2 ನೇ ಆರೋಪಿಯು ಕೊಪ್ಪದಲ್ಲಿ ಕೆ.ಇ.ಬಿ ಕೆಲಸ ಮಾಡಿಕೊಂಡಿದ್ದು, ವರ್ಗಾ ಮಾಡಿಸಿಕೊಳ್ಳದೇ ಅಲ್ಲೇ ಉಳಿದಿದ್ದ ಮತ್ತು ಹಾಸನಕ್ಕೆ ವರ್ಗಾವಣೆ ಮಾಡಿಸಿಕೊಳುವುದಾಗಿ ಹೇಳುತ್ತಿದ್ದ. ನನ್ನ ಮಗಳು ಮತ್ತು ಮಕ್ಕಳನ್ನು 1 ನೇ ಆರೋಪಿಯ ಜೊತೆಗೆ ಬಿಟ್ಟು ಹೋಗಿದ್ದ.

ನನ್ನ ಮಗಳು ಸೀಮೆಎಣ್ಣೆ ಹಾಕಿಕೊಂಡು ಬೆಂಕಿ ಹಚ್ಚಿಕೊಂಡಿರುವ ವಿಚಾರ ನಮಗೆ ತಿಳಿದು, ನನ್ನ ಮಗ ಯೋಗೇಶ ನಮ್ಮನ್ನು ಹಾಸನಕ್ಕೆ ಕರೆದುಕೊಂಡು ಹೋದನು. ನಾನು ಹಾಸನದ ಸರ್ಕಾರಿ ಆಸ್ಪತ್ರೆಗೆ ಹೋದೆ. ನನ್ನ ಮಗಳ ದೇಹ ಮೈತುಂಬಾ ಸುಟ್ಟ ಗಾಯಗಳಾಗಿತ್ತು ಮತ್ತು ಆಕೆಯು ಚಿಕಿತ್ಸೆ ಪಡೆಯುತ್ತಿದ್ದಳು, ಆಕೆಯನ್ನು ನಾನು ವಿಚಾರಿಸಿದೆ.

ನನ್ನ ಮಗಳನ್ನು ನಾನು ವಿಚಾರಿಸಿದಾಗ ಆರೋಪಿಗಳು ಆಕೆಗೆ ವಿಪರೀತ ಕಿರುಕುಳ ನೀಡುತ್ತಿದ್ದರೆಂದು ತಿಳಿಸಿದಳು. ಆಕೆಯನ್ನು ಉದ್ದೇಶಿಸಿ, ನೀನು ಇನ್ನು ಬದುಕಿದ್ದೀಯಲ್ಲಾ ಸಾಯಲಿಲ್ಲವೇ ಎಂದು ಹೀಯಾಳಿಸುತ್ತಿದ್ದರು ಎಂದು ತಿಳಿಸಿದಳು. ನನ್ನ ಮಗಳು ನನ್ನ ಬಳಿ *1-1-2018* ರಂದು *2* ನೇ ಆರೋಪಿಗೆ ನನ್ನ ಮಗಳು ಫೋನ್ ಮಾಡಿ ಹೊಸ ವರ್ಷಕ್ಕೆ ಮಕ್ಕಳಿಗೆ ಬಟ್ಟೆ ತಂದು ಕೊಟ್ಟಿಲ್ಲವೆಂದು ಫೋನ್ ಮಾಡಿದರೆ ಏನು ಪ್ರಯೋಜನ ಎಂದು ಕೇಳಿದಾಗ, ಅಲ್ಲೇ ಇದ್ದ *1* ನೇ ಆರೋಪಿಯು ಮಗ ಅಲ್ಲದೇ ಊರಿನವರು ತಂದು ಕೊಡುತ್ತಾರಾ ಎಂದು ಬೈದಳು. ನನ್ನ ಮಗಳು *2* ನೇ ಆರೋಪಿಯ ಬಳಿ ಊರಿನ ಮಕ್ಕಳೆಲ್ಲಾ ಹೊಸ ಬಟ್ಟೆ ಹಾಕಿಕೊಳ್ಳುತ್ತಾರೆ. ನೀವೇನು ತಂದು ಕೊಟ್ಟಿಲ್ಲವಲ್ಲ ಎಂದು ಕೇಳಿದ್ದಕ್ಕೆ *1* ನೇ ಆರೋಪಿ ಅಂದರೆ ನನ್ನ ಅಕ್ಕ ನನ್ನ ಮಗಳಿಗೆ ಬಾಯಿಗೆ ಬಂದಂತೆ ಬೈದಿರುತ್ತಾಳೆಂದು ನನ್ನ ಮಗಳು ತಿಳಿಸಿದಳು. ಆರೋಪಿಗಳ ಕಿರುಕುಳವನ್ನು ತಾಳಲಾರದೆ ನನ್ನ ಮಗಳು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿರುವುದಾಗಿ ನನ್ನ ಮಗಳು ಆಸ್ಪತ್ರೆಯಲ್ಲಿ ನನಗೆ ತಿಳಿಸಿದಳು. ಹಾಸನದ ಆಸ್ಪತ್ರೆಯಲ್ಲಿ ನನ್ನ ಮಗಳಿಗೆ ಮೈಸೂರಿನ ಆಸ್ಪತ್ರೆಗೆ ಹೋಗುವಂತೆ ತಿಳಿಸಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ನನ್ನ ಮಗಳು ಮೈಸೂರು ಆಸ್ಪತ್ರೆಯಲ್ಲಿ ಸುಮಾರು *10-12* ದಿನಗಳ ಕಾಲ ಬದುಕಿದ್ದಳು. ನಂತರ ತೀರಿಕೊಂಡಳು. ತಾರೀಖು ಹೇಳಲು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಈ ಬಗ್ಗೆ ದೂರು ನೀಡಿದ್ದೇನೆ. ಅದನ್ನು ನೋಡುತ್ತಿದ್ದು, ಅದನ್ನು ನಿಪಿ *6* ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ *6 (ಎ)* ಎಂದು ಗುರುತಿಸಲಾಯಿತು. ಶವ ತರುವಾಗ ಪೋಲೀಸರು ನನ್ನ ಮಗಳ ಸವಿತ ಮತ್ತು ರಂಗಸ್ವಾಮಿ ರವರ ಸಹಿಯನ್ನು ಒಂದು ದಾಖ್ಲೆಗೆ ಪಡೆದುಕೊಂಡಿದ್ದಾರೆ. ನಾನು ಮೈಸೂರಿನಿಂದ ಬಂದು ಶವ ಸಮೇತ ಹೊಳೆ ನರಸೀಪುರ ಪೋಲೀಸ್ ಠಾಣೆಗೆ ಹೋಗಿದ್ದೆವು. ಶವ ಸಂಸ್ಕಾರಕ್ಕೆ ಶವವನ್ನು ಪೋಲೀಸರು ನಮಗೆ ಬಿಟ್ಟುಕೊಟ್ಟರು. ಪೋಲೀಸರು ಆ ನಂತರ ನನ್ನ ಬಳಿ ಯಾವುದೇ ದಾಖಲೆಗಳನ್ನು ಕೇಳಿಲ್ಲ ಮತ್ತು ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಘಟನೆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ.

ಈಗ ತೋರಿಸಿದ ದಾಖ್ಲೆಯಲ್ಲಿ ನನ್ನ ಸಹಿ ಇದೆ. ಆ ದಾಖಲೆಗೆ ಎಲ್ಲಿ ಸಹಿ ಮಾಡಿದ್ದೆನೋ ಎಂದು ನನಗೆ

ಹೇಳಲು ಗೊತ್ತಾಗುತ್ತಿಲ್ಲ. ಏಕೆಂದರೆ ನಾನು ಅನಕ್ಷರಸ್ಥ. ಆ ದಾಖ್ಲೆಗೆ ಸಹಿ ಮಾಡಿದ ಸಂದರ್ಭದಲ್ಲಿ ಪೋಲೀಸರು ಯಾವುದೇ ಸ್ವತ್ತನ್ನು ನನ್ನಿಂದ ವಶಪಡಿಸಿಕೊಂಡಿಲ್ಲ. ಸಾಕ್ಷಿಗೆ ತೋರಿಸಿದ ದಾಖ್ಲೆಯನ್ನು ನಿಪಿ *7* ಎಂದು ಮತ್ತು ಅದರಲಿರುವ ಸಾಕ್ಷಿಯ ಸಹಿಯನ್ನು ನಿಪಿ *7 (ಎ)* ಎಂದು ಗುರುತಿಸಲಾಯಿತು, ಪೊಲೀಸರು ನನ್ನನ್ನು ನನ್ನ ಮಗಳ ಮದುವೆಗೆ ಸಂಬಂಧ ಪಟ್ಟ ದಾಖಲೆಗಳನು ಕೊಡುವಂತೆ ಕೇಳಿದ್ದು, ಆ ಸಮಯ ನಾನು ನನ್ನ ಮಗಳ ಲಗ್ನಪತ್ರಿಕೆ ಮತ್ತು ಮದುವೆ ಮತ್ತು ನಿಶ್ಚಿತಾರ್ಥದ ಪೋಟೋಗಳನ್ನು ಕೊಟ್ಟಿರುತ್ತೇನೆ. ಈಗ ತೋರಿಸಿದ ಲಗ್ನ ಪತ್ರಿಕೆಯು ನನ್ನ ಮಗಳ ಮದುವೆಗೆ ಸಂಬಂದ ಪಟ್ಟಿದ್ದಾಗಿದೆ. ಅದನ್ನು ನಿಪಿ *8* ಎಂದು ಗುರುತಿಸಲಾಯಿತು. ನಿಶ್ಚಿತಾರ್ಥದ *3* ಪೋಟೋಗಳನ್ನು ನಿಪಿ *9* ರಿಂದ *11* ಎಂದು ಗುರುತಿಸಲಾಯಿತು. ನಾನು ಹಾಜರು ಪಡಿಸಿದ ದಾಖಲೆಗಳನ್ನು ಸ್ವೀಕರಿಸಿ, ಪೊಲೀಸರು ಬರವಣಿಗೆ ಮಾಡಿ ಸ್ವೀಕರಿಸಿದ್ದಾರೆ. ಆ ದಾಖಲೆಗೆ ನಾನು ಸಹಿ ಮಾಡಿದ್ದೇನೆ.

ಪಾಟೀ ಸವಾಲಿಗೆ ಆರೋಪಿತರ ಪರವಾಗಿ ಶ್ರೀ ಎಂ ಎಸ್ ಪಿ ವಕಿಲರು ಸಮಯ ಕೋರಿದ್ದು, ಸಾಕ್ಷಿಗೆ *200* ರೂ ಖರ್ಚು ಕೊಡುವ ಷರತ್ತಿನ ಮೇರೇಗೆ ಸಮಯ ನೀಡಿ ಮುಂದೂಡಲಾಯಿತು.

*(ಸಾಕ್ಷಿಯ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು.)*

*ಓ.ಹೇ.ಕೇ. ಸರಿ ಇದೆ.*

*2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್*
*ನ್ಯಾಯಾಧೀಶರು, ಹಾಸನ.*